ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಹೊಸ ಸಾರ್ವಜನಿಕ ಕಚೇರಿಗಳು, ನೃಪತುಂಗ ರಸ್ತೆ, ಬೆಂಗಳೂರು–01.

ಸಂಖ್ಯೆ: ಸಿ4(7)ಪ್ರೌ..ಶಿ ವರ್ಗ: 01/2016–17 ದಿನಾಂಕ: 12–08–2016

## : ತಿದ್ದುಪಡಿ ಜ್ಞಾಪನ :

**ವಿಷಯ**:–2016–17ನೇ ಸಾಲಿನ ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರ ವೃಂದದ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಮಾಡುವ ಬಗ್ಗೆ ಮಾರ್ಗಸೂಚಿ,

**ಉಲ್ಲೇಖ**:–1.ಈ ಕಛೇರಿಯ ಪತ್ರ ಸಂಖ್ಯೆ ಸಿ4(7)ಪ್ರೌ..ಶಿ ವರ್ಗ: 01/2016–17 ದಿನಾಂಕ.02.08.2016

2.ಸರ್ಕಾರದ ಪತ್ರ ಸಂಖ್ಯೆ.ಇಡಿ 384 ಪಿಬಿಎಸ್ 2016 ದಿನಾಂಕ.11.08.2016

---*****---

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(2) ರ ಸರ್ಕಾರದ ಪತ್ರದಲ್ಲಿ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದ ವರ್ಗಾವಣೆಗಳಿಗೆ ಸಂಬಂಧಿಸಿದಂತೆ ಪ್ರಸ್ತಾಪಿಸಿದ್ದು, ಪ್ರೌಢಶಾಲಾ ಶಿಕ್ಷಕರ ವೃಂದದ ವರ್ಗಾವಣೆಗಳಿಗೆ ಸಂಬಂಧಿಸಿದಂತೆ ಉಲ್ಲೇಖ(1) ರ ಜ್ಞಾಪನದ ಮುಖಾಂತರವಾಗಿ ಹೊರಡಿಸಲಾಗಿದ್ದ ಮಾರ್ಗಸೂಚಿ ಅಂಶಗಳ ಭಾಗ–ಎ ಕ್ರಮ ಸಂಖ್ಯೆ 3ರ **"ಆದ್ಯತೆ ಬಯಸಿ ಅರ್ಜಿ ಸಲ್ಲಿಸುವವರು"** ಎಂಬ ಶೀರ್ಷಿಕೆಯಡಿ ದೈಹಿಕ ಅಂಗವಿಕಲ ಪ್ರಕರಣಗಳು ಎಂಬ ಉಪ ಶೀರ್ಷಿಕೆಯಲ್ಲಿ ಇರುವ ವಿವರಣೆಯ ಪ್ರಾರಂಭಿಕ ಭಾಗದಲ್ಲಿ " **ಅಂಗವಿಕಲ ಮೀಸಲಾತಿಯಲ್ಲಿ ನೇಮಕಾತಿ ಹೊಂದಿರಬೇಕು ಹಾಗೂ** " ಎಂಬುದನ್ನು ಕೈಬಿಡಲಾಗಿದೆ. ಅಂತೆಯೇ ವರ್ಗಾವಣಾ ಪ್ರಾಧಿಕಾರಿಗಳು ಓದಿಕೊಳ್ಳತಕ್ಕದ್ದು ಮತ್ತು ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು. ಜ್ಞಾಪನದಲ್ಲಿ ಇನ್ನಿತರೆ ಯಾವುದೇ ಬದಲಾವಣೆಗಳು ಇರುವುದಿಲ್ಲ, ಈ ವಿಚಾರವನ್ನು ವ್ಯಾಪಕವಾಗಿ ಪ್ರಚುರಪಡಿಸುವುದು.

(ಸೌಜನ್ಯ, ಭಾ.ಆ.ಸೇ)
**ಆಯುಕ್ತರು**

**ಇವರಿಗೆ,**

1. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರ ಅಗತ್ಯ ತುರ್ತು ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.

**ಪ್ರತಿಯನ್ನು:–**

1. ಸರ್ಕಾರದ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು–1 ಇವರಿಗೆ ವಂದನಾ ಪೂರ್ವಕವಾಗಿ ಸಲ್ಲಿಸಿದೆ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ/ಧಾರವಾಡ
3. ನಿರ್ದೇಶಕರು(ಪ್ರಾಥಮಿಕ) ಮತ್ತು (ಪ್ರೌಢಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು.
4. ಸಹ ನಿರ್ದೇಶಕರು–1 ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ವಿಭಾಗ.
5. ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ.
6. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹ ನಿರ್ದೇಶಕರು ಹಾಗೂ ವಿಭಾಗಯ ಕಾರ್ಯದರ್ಶಿಗಳು, ಕ.ಪ್ರೌ.ಶಿ.ಪ.ಮಂ. ಇವರುಗಳಿಗೆ ಅಗತ್ಯ ಕ್ರಮಕ್ಕಾಗಿ.
7. ಕಛೇರಿ ಪ್ರತಿ.